**ಗಂಗಾ ತಲಾವ್‌ಗೆ ಪ್ರಧಾನಮಂತ್ರಿಗಳ ಭೇಟಿ (ಮಾರ್ಚ್ 12, 2025)**

ಮಾರ್ಚ್ 12, 2025

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇಂದು ಮಾರಿಷಸ್‌ನಲ್ಲಿ ಪವಿತ್ರ ಗಂಗಾ ತಲಾವ್‌ಗೆ ಭೇಟಿ ನೀಡಿದರು. ಅಲ್ಲಿ ಅವರು ಪ್ರಾರ್ಥನೆ ಸಲ್ಲಿಸಿದರು ಮತ್ತು ತ್ರಿವೇಣಿ ಸಂಗಮದ ಪುಣ್ಯ ತೀರ್ಥವನ್ನು ಆ ಪವಿತ್ರ ಸ್ಥಳದಲ್ಲಿ ಅರ್ಪಿಸಿದರು.

2. ಪೂಜನೀಯ ಮಹಾಕುಂಭ ಮೇಳದಿಂದ ಗಂಗಾ ತಲಾವ್‌ಗೆ ಪವಿತ್ರ ನೀರನ್ನು ತಂದು ಅರ್ಪಿಸಿದ ಪ್ರಧಾನಮಂತ್ರಿಯವರ ಈ ನಡೆಯು ಕೇವಲ ಎರಡು ರಾಷ್ಟ್ರಗಳ ನಡುವಿನ ಅಧ್ಯಾತ್ಮಿಕ ಏಕತೆಯನ್ನು ಸೂಚಿಸುವುದು ಮಾತ್ರವಲ್ಲದೆ, ಉಭಯ ದೇಶಗಳ ಹಂಚಿಕೆಯ ಸಾಂಸ್ಕೃತಿಕ ಸಂಬಂಧಗಳ ಅಡಿಪಾಯವನ್ನು ರೂಪಿಸುವ ಶ್ರೀಮಂತ ಸಂಪ್ರದಾಯಗಳನ್ನು ಸಂರಕ್ಷಿಸುವಲ್ಲಿ ಮತ್ತು ಪೋಷಿಸುವಲ್ಲಿ ಅವರ ಬದ್ಧತೆಯನ್ನು ಕೂಡಾ ಸೂಚಿಸುತ್ತದೆ.

ಪೋರ್ಟ್ ಲೂಯಿಸ್

12 ಮಾರ್ಚ್ 2025